## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.94 ಹೆಣ್ಣೂರು ಸಂಬಂಧಿಸಿದಂತೆ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 07.01.2023 ರಂದು ಆಯೋಜಿಸಿದ್ದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

**ಸಭೆಯಲ್ಲಿ ಹಾಜರಿದ್ದವರ ವಿವರ:-**

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ.ಪ್ರಸನ್ನ.ವಿ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ) ಉಪ-ವಿಭಾಗ ಸಿ.ವಿ.ರಾಮನ್ ನಗರ ಹಾಗೂ ನೋಡಲ್ ಅಧಿಕಾರಿ ವಾರ್ಡ್ ಸಂಖ್ಯೆ.94 |
| 2 | ಶ್ರೀ.ಕೆ.ಎಲ್.ಸ್ವಾಮಿಲಾಲ್ | ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ. 94 ಹೆಚ್.ಬಿ.ಆರ್ ಬಡಾವಣೆ |
| 3 | ಶ್ರೀ.ಬಿ.ಎನ್.ಗೋಪಾಲ್ | ಕೆಲಸ ಪರಿವೀಕ್ಷಕರು ವಾರ್ಡ್ ಸಂಖ್ಯೆ.94 |
| 4 | ರವೀಂದ್ರನಾಥ್ | ಫಾರೆಸ್ಟ್ ಇಲಾಖೆ |
| 5 | ಶ್ರೀಮತಿ. ಆಯಿಷಾ | ಬೃಹತ್ ಮಳೆ ನೀರುಗಾಲುವೆ ಇಲಾಖೆ |
| 6 | ಶ್ರೀ.ಆರ್.ಎಸ್.ಮಂಜುನಾಥ್ | ಹೆಣ್ಣೂರು ಪೋಲೀಸ್ ಚೌಕಿ |
| 7 | ಶ್ರೀ.ಮಂಜುನಾಥ.ಜಿ | ಕಿರಿಯ ಅಭಿಯಂತರರು ಇ-9 ಉಪ-ವಿಭಾಗ |
| 8 | ಶ್ರೀಮತಿ.ಮೀನಾ.ಬಿ | ಕಿರಿಯ ಆರೋಗ್ಯ ಪರಿವೀಕ್ಷಕರು ವಾ-94 |
| 9 | ಶ್ರೀ.ಎ.ಮಣಿಶಂಕರ್ | ಹಿರಿಯ ಆರೋಗ್ಯ ಪರಿವೀಕ್ಷಕರು ವಾ-94 |
| 10 | ಶ್ರೀ.ಜಿ.ಮಹೇಶ್ | ಕೆ.ಜಿ.ಹಳ್ಳಿ ಪೋಲೀಸ್ ಠಾಣೆ |
| 11 | ಶ್ರೀ.ಮಧು.ಬಿ | ಪಿ.ಸಿ-13570 ಕೆ.ಜಿ.ಹಳ್ಳಿ ಪೋಲೀಸ್ ಠಾಣೆ |
| 12 | ದಿಲೀಪ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ |
| 13 | ಶ್ರೀ.ಶಾನುರಲಿ | ಮಾರ್ಷಲ್ |
| 14 | ಶ್ರೀ.ಎಸ್.ಜೆ.ತೋಳ್ಪಾಡಿ | ಹೆಚ್.ಬಿ.ಆರ್ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘ |
| 15 | ಶ್ರೀ.ಪ್ರಸನ್ನ | ಹೆಚ್.ಬಿ.ಆರ್ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘ |
| 16 | ಪಿ.ವಾಸುಮತಿ | ಹೆಚ್.ಬಿ.ಆರ್ ಆರ್.ಡಬ್ಲ್ಯೂ.ಎ |
| 17 | ಶ್ರೀ.ಹರೀಶ್ ಬಾಬು.ಎಂ | ಅಧ್ಯಕ್ಷರು (ಮಾಸ್) |
| 18 | ಶ್ರೀ.ವಿಕ್ರಂ | ಸ್ಥಳೀಯರು |
| 19 | ಶ್ರೀ.ಉದಯಶಂಕರ್ | ಸ್ಥಳೀಯರು |
| 20 | ಕೆ.ಸಿ.ರೆಡ್ಡಿ | ಸ್ಥಳೀಯರು |

| | | |
|---|---|---|
| 21 | ಕೆ.ಗರುಡಾಚಾರ್ | ಸ್ಥಳೀಯರು |
| 22 | ಶ್ರೀ.ಶಾಜಿ ಕುನ್ನತ್ | ಸ್ಥಳೀಯರು |
| 23 | ಶ್ರೀ.ನಿರಂಜನ್ | ಸ್ಥಳೀಯರು |

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿ / ನೌಕರರು ಹಾಗೂ ಸದಸ್ಯರುಗಳನ್ನು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1. <u>ಅರಣ್ಯ ಇಲಾಖೆ:-</u> ವಾರ್ಡ್ ವ್ಯಾಪ್ತಿಯಲ್ಲಿನ ಹಲವು ಪ್ರದೇಶಗಳಲ್ಲಿ ಮರಗಳ ರೆಂಬೆಗಳು ಒಣಗಿದ್ದು, ತುರ್ತಾಗಿ ಅವುಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಸಭೆಯಲ್ಲಿ ತಿಳಿಸಿದರು.

   ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಶ್ರೀ.ರವೀಂದನಾಥ್ ಅರಣ್ಯಾಧಿಕಾರಿಗಳು ರವರಿಗೆ ಕ್ರಮ ವಹಿಸಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

   <u>(ಕ್ರಮ:- ಅರಣ್ಯ ಇಲಾಖೆ (ಪೂರ್ವ) ಇಲಾಖೆ ಬೆಂಗಳೂರು)</u>

2. <u>ಕಾಮಗಾರಿ ಇಲಾಖೆ:-</u> ವಾರ್ಡ್ ವ್ಯಾಪ್ತಿಯಲ್ಲಿ ಕೆಲವು ಕಡೆ ಫುಟ್‌ಪಾತ್ ಅನ್ನು ಒತ್ತುವರಿ ಮಾಡಿಕೊಂಡಿರುವುದು ಕಂಡು ಬಂದಿದ್ದು, ಅವುಗಳನ್ನು ಕೂಡಲೇ ತೆರವುಗೊಳಿಸಬೇಕೆಂದು ಹಾಗೂ ಕೆಲವು ಕಡೆ ಪಾಟ್‌ಹೋಲ್‌ಗಳನ್ನು ಹಾಕಲು ತಿಳಿಸಿರುತ್ತಾರೆ. ವಾರ್ಡ್ ವ್ಯಾಪ್ತಿಯಲ್ಲಿ ಕೆಲವು ಕಡೆ ಫುಟ್‌ಪಾತ್ ಒತ್ತುವರಿ ಮಾಡಿಕೊಂಡಿರುವುದು ಕಂಡು ಬಂದಿದ್ದು, ಕೆ.ಪಿ.ಟಿ.ಸಿ.ಎಲ್ ಗೋವಿಂದಪುರ ರಸ್ತೆಯಲ್ಲಿ ಟೀ ಅಂಗಡಿ, ಇನ್ನಿತರ ಅಂಗಡಿಗಳು ಫುಟ್‌ಪಾತ್ ಮೇಲೆಯೇ ಹಾಕಿ ರಸ್ತೆಯ ಇಕ್ಕೆಲಗಳಲ್ಲಿ ವಾಹನಗಳನ್ನು ನಿಲ್ಲಿಸಿರುವುದರಿಂದ ಸಂಚಾರಕ್ಕೆ ತುಂಬಾ ತೊಂದರೆಯಾಗಿದ್ದು, ಇದರ ಬಗ್ಗೆ ಕ್ರಮವಹಿಸಬೇಕೆಂದು ಸಭೆಯಲ್ಲಿ ತಿಳಿಸಿರುತ್ತಾರೆ. ಮತ್ತು ಫುಟ್‌ಪಾತ್ ಎಂಕ್ರೋಚ್‌ಮೆಂಟ್ ಅತಿಯಾಗಿರುವುದರಿಂದ ಫುಟ್‌ಪಾತ್ ಡ್ರೈನ್ ಹಮ್ಮಿಕೊಳ್ಳಲು ತಿಳಿಸಿರುತ್ತಾರೆ.

   ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ-ವಿಭಾಗ ರವರಿಗೆ ಕ್ರಮ ಕೈಗೊಳ್ಳುವಂತೆ ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

   <u>(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ-ವಿಭಾಗ, ಆರೋಗ್ಯ ವೈದ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗ, ಮತ್ತು ಸಂಚಾರಿ ಪೋಲೀಸ್ ಠಾಣೆ ಕೆ.ಜಿ.ಹಳ್ಳಿ)</u>

3. <u>ರಸ್ತೆಮೂಲಭೂತ ಸೌಕರ್ಯ ವಿಭಾಗ:-</u> ವಾರ್ಡ್ ವ್ಯಾಪ್ತಿಯಲ್ಲಿ, ಮೇಜರ್ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಟೆಂಡರ್ ಶೂರ್ ಯೋಜನೆ ಅಡಿಯಲ್ಲಿ ರಸ್ತೆಯ ಕಾಮಗಾರಿ ಪ್ರಗತಿಯಲ್ಲಿದ್ದು, ಕಾಮಗಾರಿಯ ಅಂದಾಜು ಪಟ್ಟಿ/ ಕರಾರು ಪತ್ರದ (ಅಗ್ರೀಮೆಂಟ್) ಬಗ್ಗೆ ಮಾಹಿತಿ ಒದಗಿಸಲು ಸಭೆಯಲ್ಲಿ ತಿಳಿಸಿದರು.

   ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ವಿಭಾಗ (ಪೂರ್ವ) ವಲಯ ರವರಿಗೆ ಕ್ರಮ ಕೈಗೊಳ್ಳಲು ತಿಳಿಸುವಂತೆ ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

   <u>(ಕ್ರಮ:- ರಸ್ತೆ ಮೂಲಭೂತ ಸೌಕರ್ಯ ವಿಭಾಗ (ಪೂರ್ವ) ವಲಯ ಬೆಂಗಳೂರು)</u>

4. <u>ಆರೋಗ್ಯ ಇಲಾಖೆ:-</u> ವಾರ್ಡ್ ವ್ಯಾಪ್ತಿಯ ಭೈರವೇಶ್ವರ ಲೇಔಟ್ 2ನೇ, 3ನೇ ಮುಖ್ಯರಸ್ತೆ ಹಾಗೂ ವಾರ್ಡ್‌ವಾರು ಸೊಳ್ಳೆಗಳ ಹಾವಳಿ ಹೆಚ್ಚಾಗಿರುವುದರಿಂದ ಔಷಧಿ, ಫಾಗಿಂಗ್ ಮತ್ತು ಸ್ಪ್ರೇಯಿಂಗ್ ಸಿಂಪಡಿಸಬೇಕೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಆರೋಗ್ಯ ವೈದ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗ ರವರಿಗೆ ಕ್ರಮ ಕೈಗೊಳ್ಳಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

<u>(ಕ್ರಮ:- ಆರೋಗ್ಯ ವೈದ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗ ಬಿ.ಬಿ.ಎಂ.ಪಿ ಬೆಂಗಳೂರು)</u>

5. <u>ಬಿ.ಡಬ್ಲ್ಯೂ.ಎಸ್.ಎಸ್.ಬಿ:-</u>ವಾರ್ಡ್ ವ್ಯಾಪ್ತಿಯಲ್ಲಿನ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಮ್ಯಾನ್‌ಹೋಲ್‌ನಿಂದ ಹೊರತೆಗೆದ ಹೂಳನ್ನು ಹಾಗೆ ಬಿಟ್ಟಿರುವ ಬಗ್ಗೆ ಹಾಗೂ 5ನೇ ಕ್ರಾಸ್‌ನಲ್ಲಿ ನೀರಿನ ಕಾಂಪೌಂಡ್ ಒತ್ತುವರಿ ಮಾಡಿದ್ದು, ವಿದ್ಯುತ್ ಕಂಬ ಕಾಂಪೌಂಡ್ ಒಳಗೆ ಇರುವುದರಿಂದ ಇದು ಬಿ.ಡಬ್ಲ್ಯೂ.ಎಸ್.ಎಸ್.ಬಿ ಸ್ವತ್ತಾಗಿದಲ್ಲಿ ಸೂಕ್ತ ದಾಖಲೆಗಳನ್ನು ಒದಗಿಸಲು ಕೋರಿರುತ್ತಾರೆ ಹಾಗೂ ಒಳಗಿರುವ ವಿದ್ಯುತ್ ಕಂಬವನ್ನು ಕಾಂಪೌಂಡಿನಿಂದ ಹೊರಹಾಕಲು ಕ್ರಮವಹಿಸಲು ತಿಳಿಸಿದರು. ವಾರ್ಡ್ ವ್ಯಾಪ್ತಿಯ 19ನೇ ಮುಖ್ಯರಸ್ತೆ , 43ನೇ ಅಡ್ಡರಸ್ತೆ, 18ನೇ ಮುಖ್ಯರಸ್ತೆ 5ನೇ ಬ್ಲಾಕ್, ಭೈರವೇಶ್ವರ ಬಡಾವಣೆಗಳಲ್ಲಿ ಮ್ಯಾನ್‌ಹೋಲ್‌ಗಳಿಂದ ನೀರು ಓವರ್‌ಫ್ಲೋ ಆಗುತ್ತಿದ್ದು, ಮ್ಯಾನ್‌ಹೋಲ್‌ಗಳಿಂದ ಹಿಮ್ಮುಖವಾಗಿ ಮನೆಗಳ ಚೇಂಬರ್‌ಗೆ ನೀರು ಹರಿಯುತ್ತಿದ್ದು, ಮನೆಯ ಛೇಂಬರ್‌ನಿಂದ ನೀರು ಚರಂಡಿಗೆ ಬರುತ್ತಿದೆ ಎಂದು ತಿಳಿಸಿರುತ್ತಾರೆ.

<u>(ಕ್ರಮ:- ಸ.ಕಾ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ ಉಪ-ವಿಭಾಗ ಕಲ್ಯಾಣನಗರ ಬೆಂಗಳೂರು)</u>

6. <u>ಬೃಹತ್ ಮಳೆನೀರು ಗಾಲುವೆ ವಿಭಾಗ (ಬಿ.ಬಿ.ಎಂ.ಪಿ)</u> ವಾರ್ಡ್ ವ್ಯಾಪ್ತಿಯ ರಾಜಕಾಲುವೆಯಲ್ಲಿ ಡೀಸಿಲ್ಟಿಂಗ್ ನಡೆಯುತ್ತಿದ್ದು, 5ನೇ ಬ್ಲಾಕ್ 19ನೇ ಮುಖ್ಯರಸ್ತೆಯಿಂದ ಭೈರವೇಶ್ವರ ಬಡಾವಣೆವರೆಗೂ ಡೀಸಿಲ್ಟಿಂಗ್ ಮಾಡಲು ತಿಳಿಸಿರುತ್ತಾರೆ ಹಾಗೂ ಗೋವಿಂದಪುರ ಮುಖ್ಯರಸ್ತೆಯ ರಾಜಕಾಲುವೆಯ ಇಕ್ಕೆಲಗಳಲ್ಲಿ ಸರ್ವೀಸ್ ರಸ್ತೆಯು ಅಸಮರ್ಪಕವಾಗಿದ್ದು, ಇದು ರಾಜಕಾಲುವೆಯ ರಿಟೈನಿಗೆ ವಾಲ್ ನಿರ್ಮಾಣ ಮಾಡುವ ಸಮಯದಲ್ಲಿ ರಸ್ತೆಯು ಹಾಳಾಗಿದ್ದು, ರಸ್ತೆಯನ್ನು ಸುಗಮ ಸಂಚಾರಕ್ಕೆ ಅನುವುಮಾಡಿಕೊಡಲು ಕೋರಿರುತ್ತಾರೆ. ಹಾಗೂ ಮುಂದಿನ ವಾರ್ಡ್ ಸಮಿತಿ ಸಭೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೃಹತ್ ಮಳೆ ನೀರು ಗಾಲುವೆ ವಿಭಾಗ ರವರು ಖುದ್ದಾಗಿ ಸಭೆಗೆ ಹಾಜರಾಗಲು ನೋಡಲ್ ಅಧಿಕಾರಿ ರವರು ತಿಳಿಸಿರುತ್ತಾರೆ.

<u>(ಕ್ರಮ:- ಸ.ಕಾ.ಅ ಬೃಹತ್ ಮಳೆನೀರು ಗಾಲುವೆ ವಿಭಾಗ (ಬಿ.ಬಿ.ಎಂ.ಪಿ)</u>

7. <u>ವಿದ್ಯುತ್ ವಿಭಾಗ:-</u> ವಾರ್ಡ್ ವ್ಯಾಪ್ತಿಯಲ್ಲಿ ಹಾಗೂ ಹೆಣ್ಣೂರು ಸುತ್ತಮುತ್ತಲಿನ ಪ್ರದೇಶದಲ್ಲಿ ಬಹುತೇಕ ಎಲ್.ಇ.ಡಿ ಬೀದಿ ದೀಪಗಳು ದುರಸ್ಥಿಯಲ್ಲಿದ್ದು, ಸಮಯಕ್ಕೆ ಸರಿಯಾಗಿ ಬಲ್ಪ್ ಹಾಗೂ ಸ್ವಿಚಸ್‌ಗಳು ಬದಲಾಯಿಸುತ್ತಿಲ್ಲವೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

ಸದರಿ ವಿಷಯದ ಬಗ್ಗೆ ವಾರ್ಡ್ ಸಮಿತಿ ಸಭೆಗೆ ವಿದ್ಯುತ್ ವಿಭಾಗದ ಅಧಿಕಾರಿಗಳು ಹಾಜರಾಗಿರದ ಕಾರಣ ಮುಂದಿನ ವಾರ್ಡ್ ಸಮಿತಿ ಸಭೆಗೆ ತಪ್ಪದೆ ಹಾಜರಾಗುವಂತೆ ತಿಳಿಸಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

<u>(ಕ್ರಮ:- ಕಾ.ಪಾ.ಅ ವಿದ್ಯುತ್ ವಿಭಾಗ)</u>

8. <u>ಪಶುಪಾಲನಾ ಇಲಾಖೆ:-</u> ವಾರ್ಡ್ ವ್ಯಾಪ್ತಿಯಲ್ಲಿ ಹಸುಗಳು ರಸ್ತೆಯಲ್ಲಿ ಸಂಚರಿಸುತ್ತಿದ್ದು, ಕೆ.ಪಿ.ಟಿ.ಸಿ.ಎಲ್ ರಸ್ತೆಯಲ್ಲಿ ಹಸುಗಳನ್ನು ಹಾಗೂ ಇನ್ನಿತರ ಬಳಸಿದ ಪದಾರ್ಥಗಳನ್ನು ಫುಟ್‌ಪಾತ್ ಮೇಲೆ ಹಾಕುತ್ತಿದ್ದಾರೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

ಮೇಲ್ಕಂಡ ವಿಷಯದ ಬಗ್ಗೆ ಸಂಬಂಧಪಟ್ಟ ಇಲಾಖೆಯ ಗಮನಕ್ಕೆ ತರಲಾಗುವುದು ಎಂದು ನೋಡಲ್ ಅಧಿಕಾರಿಗಳು ತಿಳಿಸಿರುತ್ತಾರೆ.

<u>(ಕ್ರಮ:- ಪಶುಪಾಲನಾ ಇಲಾಖೆ ಬಿ.ಬಿಎಂ.ಪಿ (ಪೂರ್ವ) ಮತ್ತು ಆರೋಗ್ಯ ವೈದ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗ ಬೆಂಗಳೂರು)</u>

9. <u>ಕೆ.ಜಿ.ಹಳ್ಳಿ ಪೊಲೀಸ್ ಠಾಣೆ:-</u> ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿ ಎಲ್ಲೆಂದರಲ್ಲಿ ವಾಹನಗಳನ್ನು ನಿಲ್ಲಿಸುತ್ತಿದ್ದು, ಅನುಪಯುಕ್ತ ವಾಹನಗಳನ್ನು ಗುರುತಿಸಿ ಅವುಗಳನ್ನು ತೆರವುಗೊಳಿಸಲು ಸಭೆಯಲ್ಲಿ ಹಾಜರಿದ್ದ ಶ್ರೀ ಮಹೇಶ್.ಬಿ ಪೊಲೀಸ್ ಇನ್ಸ್‌ಪೆಕ್ಟರ್‌ರವರಿಗೆ ತಿಳಿಸಲಾಗಿದ್ದು, ಬಿ.ಬಿ.ಎಂ.ಪಿ ಹಾಗೂ ಪೊಲೀಸ್ ಇಲಾಖೆ ಸಹಮತದೊಂದಿಗೆ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು ಹಾಗೂ ಹೆಚ್.ಬಿ.ಆರ್ ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲಿಯೂ ಸಿಗ್ನಲ್ ಲೈಟ್ಸ್ ಅಳವಡಿಸಿರುವುದಿಲ್ಲ ಇದು ಸುಗಮ ಸಂಚಾರಕ್ಕೆ ಅನಾನುಕೂಲವಾಗಿರುವುದರಿಂದ ಸಿಪ್ಪರ್ಡ್ಸ್ ಸರ್ಕಲ್ ಹಾಗೂ ಅಯೋಧ್ಯ ಸರ್ಕಲ್‌ಗಳಲ್ಲಿ (ರಾಮ ಟೆಂಪಲ್ ಹತ್ತಿರ) ಸಿಗ್ನಲ್ ಲೈಟ್ ಅಳವಡಿಸಲು ಸೂಚಿಸಲಾಯಿತು.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಶ್ರೀ.ಮಹೇಶ್ ಪೊಲೀಸ್ ಇನ್ಸ್‌ಪೆಕ್ಟರ್ ರವರಿಗೆ ತಿಳಿಸಲಾಗಿ, ಬಿ.ಬಿ.ಎಂ.ಪಿ ಹಾಗೂ ಪೊಲೀಸ್ ಇಲಾಖೆ ಸಹಮತದೊಂದಿಗೆ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು.

<u>(ಕ್ರಮ:- ಆರಕ್ಷಕ ವೃತ್ತ ನಿರೀಕ್ಷಕರು ಕೆ.ಜಿ.ಹಳ್ಳಿ ಪೊಲೀಸ್ ಠಾಣೆ, ಬೆಂಗಳೂರು ಮತ್ತು ಕಾಮಗಾರಿ ಇಲಾಖೆ)</u>

ಮುಂದುವರೆದು ದಿನಾಂಕ: 07.01.2023 ರಂದು ವಾರ್ಡ್ ಸಮಿತಿ ಸಭೆಗೆ ಗೈರು ಹಾಜರಾಗಿರುವ ಅಧಿಕಾರಿಗಳನ್ನು ಮುಂದಿನ ವಾರ್ಡ್ ಸಮಿತಿ ಸಭೆಗೆ ತಪ್ಪದೇ ಹಾಜರಾಗಲು ತಿಳಿಸಲಾಗಿದೆ. ತಪ್ಪಿದ್ದಲ್ಲಿ ಮೇಲಾಧಿಕಾರಿಗಳಿಗೆ ವರದಿ ಮಾಡಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಂದನೆಗಳೊಂದಿಗೆ,

ಶ್ರೀ.ಕೆ.ಎಲ್.ಸ್ವಾಮಿಲಾಲ್
ಸದಸ್ಯ ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ 94 ಹೆಣ್ಣೂರು

ಶ್ರೀ.ಪ್ರಸನ್ನ.ವಿ
ಸಹಾಯಕ ಕಾರ್ಯಪಾಲಕ ಅಭಿಯಂತರರು
ಘನತ್ಯಾಜ್ಯ ನಿರ್ವಹಣೆ ಉಪ-ವಿಭಾಗ
ಸಿ.ವಿ.ರಾಮನ್ ನಗರ ಹಾಗೂ ನೋಡಲ್ ಅಧಿಕಾರಿ

<u>ಪ್ರತಿಯನ್ನು</u>

1. ಮಾನ್ಯ ಶಾಸಕರು, ಸರ್ವಜ್ಞನಗರ ವಿಧಾನ ಸಭಾಕ್ಷೇತ್ರ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕೌನ್ಸಿಲ್ ಕಾರ್ಯದರ್ಶಿಗಳು ಬಿ.ಬಿ.ಎಂ.ಪಿ ಕೇಂದ್ರ ಕಚೇರಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗೆ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ) 16ನೇ ಮುಖ್ಯ, ಪಿ.ಯು.ಬಿ. ಬಿಲ್ಡಿಂಗ್ ಮೆಯೋಹಾಲ್ ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ
7. ಸಹಾಯಕ ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ವಿಭಾಗ ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೃಹತ್ ಮಳೆ ನೀರುಗಾಲುವೆ ವಿಭಾಗ ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕಲ್ಯಾಣನಗರ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
10. ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
11. ಆರಕ್ಷಕ ವೃತ್ತ ನಿರೀಕ್ಷಕರು (ಕಾನೂನು ಮತ್ತು ಸುವ್ಯವಸ್ಥೆ) ಕೆ.ಜಿ.ಹಳ್ಳಿ ಪೊಲೀಸ್ ಠಾಣೆ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
12. ಪಶು ವೈದ್ಯಾಧಿಕಾರಿಗಳು ಬಿ.ಬಿ.ಎಂ.ಪಿ ಪೂರ್ವ ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
13. ಕಛೇರಿ ಕಡತಕ್ಕೆ